ತಯಾರಿಸಲು ಕ್ರಮ ಕೈಗೊಂಡಿದ್ದು ಇಷ್ಟರಲ್ಲಿಯೇ ಅವುಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲಿದ್ದಾರೆ. ಅರಣ್ಯ ಸಂರಕ್ಷಣಾ ಕಾಯ್ದೆ 1980ರನ್ವಯ ಕಡತಗಳನ್ನು ತಯಾರಿಸುವಲ್ಲಿ ಅಕ್ರಮ ಪ್ರದೇಶದ ಮೋಜಿಣಿ ಕಾರ್ಯ ನಡೆಯಬೇಕಾಗಿರುವುದರಿಂದಲೂ ಮತ್ತು ಮೇಲ್ಕಂಡ ಆದೇಶದ ರೀತ್ಯಾ 3 ಎಕರೆ ಅಥವಾ ಕಮ್ಮಿ ಇರುವ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಮತ್ತು ಭೂರಹಿತ ಸಣ್ಣ ವ್ಯವಸಾಯ ಕೂಲಿಕಾರರು ಹಾಗೂ ಸಾಕಷ್ಟು ಭೂಮಿ ಇಲ್ಲದವರನ್ನು ಗುರುತಿಸಬೇಕಾಗಿರುವುದರಿಂದ ಈ ಪ್ರಕರಣಗಳು ತಡವಾಗುತ್ತಿವೆ.

ಇಂತಹ ಅತಿಕ್ರಮಣಗಳಲ್ಲಿ, ದಿನಾಂಕ : 27-4-78 ರ ಪೂರ್ವದಿಂದಲೂ ಆಗಿದೆಯೇ ಅಥವಾ ಇಲ್ಲವೆ ಎಂಬ ಅನುಮಾನಾಸ್ಪದ ಪ್ರಕರಣಗಳು ಕಂಡು ಬಂದಲ್ಲಿ, ಅಂತಹ ಪ್ರಕರಣಗಳನ್ನು ದಿನಾಂಕ : 9-11-92 ರ ಸರ್ಕಾರಿ ಆದೇಶ ಸಂಖ್ಯೆ : ಎ.ಹೆಚ್.ಎಫ್.ಎಫ್. 5 ಎಫ್.ಜಿ.ಎಲ್, 90 (ವಾಲ್ಯೂಂ-2) ರಂತೆ ರಚಿಸಲಾದ ತಾಲ್ಲೂಕು ಮಟ್ಟದ ಸಮಿತಿಗಳಿಗೆ ವಹಿಸಲಾಗುವುದು. ಸದರಿ ಸಮಿತಿಯಲ್ಲಿ ಈ ಕೆಳಕಂಡಂತೆ ಸದಸ್ಯರಿರುತ್ತಾರೆ.

1. ಉಪ ಅರಣ್ಯ ಸಂರಕ್ಷಣಾಧಿಕಾರಿ : ಅಧ್ಯಕ್ಷರು
2. ಸ್ಥಳೀಯ ಶಾಸಕರು ಅಥವಾ ಅವರ ನಾಮ ನಿರ್ದೇಶಿತ ವ್ಯಕ್ತಿ : ಸದಸ್ಯರು
3. ಅಧಿಕಾರೇತರರು : ಸದಸ್ಯರು
4. ತಾಲ್ಲೂಕು ತಹಶೀಲ್ದಾರರು : ಸದಸ್ಯರು
5. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು : ಸದಸ್ಯರು ಮತ್ತು ಸಂಚಾಲಕರು.

ತಾಲ್ಲೂಕು ಮಟ್ಟದ ಸಮಿತಿಗಳಿಗೆ ನೇಮಕಾತಿ ಮಾಡಬಹುದಾದ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಅಧಿಕಾರೇತರ ಸದಸ್ಯರ ಹೆಸರನ್ನು ನಮೂದಿಸಿ ಬೇರೆಯೇ ಆದೇಶ ಹೊರಡಿಸಲು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಅತಿಕ್ರಮಣದ ಬಗ್ಗೆ ಬರುವ ಅನುಮಾನಾಸ್ಪದ ಪ್ರಕರಣಗಳ ಬಗ್ಗೆ ಕೈಗೊಳ್ಳುವ ಕಾರ್ಯ ಮತ್ತು ಅವುಗಳ ಇತ್ಯರ್ಥಗಳ ಬಗ್ಗೆಯೂ ಸಹಾ ಮಾರ್ಗ ಸೂಚನೆಗಳನ್ನು ಹೊರಡಿಸಿದ್ದು, ಅಂತಹ ಪ್ರಕರಣಗಳಲ್ಲಿ ಸಮಿತಿಯ ಶಿಫಾರಸ್ಸೇ, ಅಂತಿಮವಾಗಿರುತ್ತದೆ. ದಿನಾಂಕ : 27-4-1978ರ ನಂತರ ಅತಿಕ್ರಮಣ ಮಾಡಿದವರನ್ನು ಮತ್ತು 3 ಎಕರೆಗಿಂತ (1.2 ಹೆ) ಮೇಲ್ಪಟ್ಟು ಅಕ್ರಮ ಸಾಗುವಳಿ ಮಾಡುತ್ತಿರುವರನ್ನು ಹಾಗೂ 3 ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವವರನ್ನು ಸರ್ಕಾರಿ ಆದೇಶ ಸಂಖ್ಯೆ ಎ.ಹೆಚ್.ಎಫ್.ಎಫ್. 5 ಎಫ್.ಜಿ.ಎಲ್, 90 (ವಾಲ್ಯೂಂ-2) ದಿನಾಂಕ : 10-10-91ರ ಅನ್ವಯ, ಮತ್ತು ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 64 (ಎ)ರ ರೀತ್ಯಾ ಅಕ್ರಮ ಸಾಗುವಳಿ ಪ್ರದೇಶದಿಂದ ತೆರವು ಮಾಡಿಸಬೇಕಾಗುತ್ತದೆ.

3) <u>ಖಾದಿ ಗ್ರಾಮೋದ್ಯೋಗ ಮಂಡಳಿಯಿಂದ ಮುಧೋಳ ಗೋಪನದಲ್ಲಿ ಗ್ರಾಮದ ಬಡಜನರಿಗೆ ಚರ್ಮೋದ್ಯೋಗಕ್ಕಾಗಿ ಸಾಲದ ಮಂಜೂರಾತಿ.</u>

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಅಧ್ಯಕ್ಷರೇ, ಖಾದಿ ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು ಇವರು ಪತ್ರ ಸಂಖ್ಯೆ ಡಿಒ : ನಂ ಕಬಿ : ಡಿಒ 6 : 2 : ಲೆದರ್ : 344-92-93 ದಿನಾಂಕ 3.10.92ರಂದು ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಮುಧೋಳ-ಗೋಪನಪಲ್ಲಿ ಗ್ರಾಮದ ಬಡ ಹರಿಜನರಿಗೆ ಚರ್ಮೋದ್ಯೋಗಕ್ಕಾಗಿ ಮಂಜೂರಾಗಿರುವ ಸಾಲವನ್ನು ಲಿಡ್ಕರ್ ಸಂಘ ಕಳಪೆ ದರ್ಜೆಯ ಸಾಮಗ್ರಿಗಳನ್ನು ಸರಬರಾಜು ಮಾಡುತ್ತದೆಂದು ಆಕ್ಷೇಪಣೆ ಮಾಡಿದ್ದರಿಂದ ಬೇರೆ ಕಡೆಯಿಂದ ಸಾಲದ ಸಾಮಗ್ರಿ ಹಾಗೂ

ಹಣವನ್ನು ವಿತರಣೆ ಮಾಡಲು ಸೂಚಿಸಿದರೆ ಇಲ್ಲಿಯವರೆಗೆ ವಿತರಣೆ ಮಾಡಿಲ್ಲ ಏಕೆ? ಈ ಫಲಾನುಭವಿಗಳಿಗೆ ಸಾಲ ಮಂಜೂರಾಗಿ 2-3 ವರ್ಷಗಳಿಂದ ಅಲೆದಾಡಿಸಿದರೆ ಈ ಮಂಜೂರಾಗಿರುವ ಸಾಲದ ಅರ್ಧದಷ್ಟು ಪೊತ್ತ ತಿರುಗಾಡುವುದರಲ್ಲಿಯೇ ವೆಚ್ಚವಾದಂತಾಗಲಿಲ್ಲವೆ? ಖಾದಿ ಗ್ರಾಮೋದ್ಯೋಗ ಮಂಡಳಿ ಸಂಘ ಸೇಡಂ, ರವರಿಗೆ ಸುಸ್ತಿ ಬಾಕಿದಾರರಿಗೆ ದಾವೆ ಹೂಡಿ ಮಂಜೂರಾಗಿರುವ ಬಡ ಹರಿಜನರಿಗೆ ಸಾಲ ವಿತರಣೆ ಮಾಡಲು ಆದೇಶ ನೀಡಿದರೆ ಇಲ್ಲಿಯವರೆಗೆ ಒಂದೆರಡು ತಿಂಗಳಾದರೂ ಈ ಬಡ ಹರಿಜನರಿಗೆ ಸಾಲ ನೀಡಲಾರದ ಕಾರಣ ಈಗಲೂ ಸಹ ತಿರುಗಾಡುವುದು ತಪ್ಪಿಲ್ಲ. ಈ 40 ಫಲಾನುಭವಿಗಳಿಗೆ ಅತೀ ತೀವ್ರವಾಗಿ ಚರ್ಮೋದ್ಯೋಗದ ಸಾಲವನ್ನು ನೀಡಿ ಆಂಧ್ರದ ಗಡಿ ಪ್ರಾಂತ್ಯದಲ್ಲಿಯ ಬಡ ಹರಿಜನರ ಜೀವನೋಪಾಯಕ್ಕಾಗಿ ಮಂಜೂರಾಗಿರುವ ಸಾಲವನ್ನು ಕೊಡಲು ವ್ಯವಸ್ಥೆ ಮಾಡಿ ಅವರ ಜೀವನೋಪಾಯಕ್ಕೆ ಆಧಾರ ಮಾಡುವಿರೆಂದು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

4) ಚನ್ನಪಟ್ಟಣ ತಾಲ್ಲೂಕು ಎಂ. ಕೆ. ದೊಡ್ಡಿಯ ಮತೀಯ ಗಲಭೆಯಲ್ಲಿ ಮನೆಗಳನ್ನು ಕಳೆದುಕೊಂಡವರಿಗೆ ಪರಿಹಾರ.

SRI SADATH ALI KHAN (Channapatna) : Whether it is a fact that the Hon'ble Chief Minister of Karnataka has given assurance on the floor of the Assembly on the following matters:

a) The houses will be constructed to the families who lost their houses in fire accidents during the communal riots in the State ;
b) Whether it is a fact that 18 houses were burnt during the communal clashes at M. K. Doddi, Channapatna taluk ;
c) The houses have not been constructed so far to the 18 families in the above village ;
d) If so, the reason for inordinate delay to construct the houses to the above families which is pending since last three years ;
e) The action taken by the government to construct the houses to them, and
f) When it will be constructed , definite time limit may be given.